**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

ಸಿಸಿ ನಂಃ **376/2023**
ಸಿಡಬ್ಲ್ಯೂ:**9** ಪಿಡಬ್ಲ್ಯೂ: **4**

| | |
|---|---|
| ಸಾಕ್ಷಿದಾರರ ಹೆಸರು | ಸಂಜೀವ ಕುಲ್ಲೂರ |
| ತಂದೆ/ಗಂಡನ ಹೆಸರು | ಧರಿಯಪ್ಪ |
| ವಯಸ್ಸು | 38 |
| ಉದ್ಯೋಗ | ಉಪನ್ಯಾಸಕರು |
| ವಾಸಸ್ಥಳ | ರಬಕವಿ |

**ಸಾಕ್ಷಿಯನ್ನು ಇಂದು ದಿನಾಂಕಃ 23-01-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಚಾಸಾ-1 ನನ್ನ ಹೆಂಡತಿ. ಚಾಸಾ-4 ರಿಂದ 8 ರವರ ಪರಿಚಯ ಇರುತ್ತದೆ. ಆರೋಪಿ ನನಗೆ ಪರಿಚಯ. ದಿಃ 23-01-2023 ರಂದು ಬೆಳಿಗ್ಗೆ 6 ಗಂಟೆಗೆ ನಾನು , ಚಾಸಾ-4 ರವರು ವಾಕಿಂಗ್ ಮುಗಿಸಿಕೊಂಡು ಮರಳಿ ಬರಬೇಕಾದರೇ ನನ್ನ ಹಿಂದಗಡೆಯಿಂದ ಬಸ್ ಡಿಕ್ಕಿ ಹಾಯಿಸಿ ಅಪಘಾತಪಡಿಸಿತು. ಸದರಿ ಅಪಘಾತದಲ್ಲಿ ತಲೆಗೆ ಪೆಟ್ಟು ಗಾಯವಾಗಿ ಪ್ರಜ್ಞೆ ಹೋಯಿತು. ನನಗೆ ಪ್ರಜ್ಞೆ ಬಂದಾಗ ಬಸ್ ನಿರ್ವಾಹಕರು ನನ್ನನ್ನು ದಾನಗೊಂಡ ಆಸ್ಪತ್ರೆಗೆ ಪ್ರಥಮಾ ಚಿಕಿತ್ಸೆಗಾಗಿ ಕರೆದೊಯದ್ದರು ಎಂದು ಗೊತ್ತಾಯಿತು. ಸದರಿ ಬಸ್ ನಿರ್ವಾಹಕರ ಹೆಸರು ನನಗೆ ಗೊತ್ತಿಲ್ಲ ಸದರಿ ಬಸ್ ಸಂಖ್ಯೆಃ KA-29-F-1352 ಅಂತ ಇರುತ್ತದೆ. ಸದರಿ ಬಸ್ ಹನಗಂಡಿಯಿಂದ ರಬಕವಿ ಕಡೆಗೆ ಬರುತ್ತಿತ್ತು. ನಂತರ ಚಾಸಾ-1 ರವರು ತೇರದಾಳ ಪೊಲೀಸ ಠಾಣೆಯಲ್ಲಿ ಸದರಿ ಬಸ್ ಚಾಲಕನ ವಿರುದ್ಧ ದೂರನ್ನು ದಾಖಲಿಸಿದರು. ನಾನು ಸೈಡಿನಲ್ಲಿ ಹೋಗುತ್ತಿರುವಾಗ ಸದರಿ ಬಸ್ ಚಾಲಕನು ಡಿಕ್ಕಿ ಹಾಯಿಸಿ ಅಪಘಾತಪಡಿಸಿರುತ್ತಾರೆ. ನಂತರ ಸ್ಥಳದಲ್ಲಿ ಇರುವ ಸಾರ್ವಜನಿಕರು ಬಸ್ ಚಾಲಕನ ನನಗೆ ಪ್ರಥಮ ಚಿಕಿತ್ಸೆಯನ್ನು ಕೊಡದೇ ಓಡಿ ಹೋಗಿರುತ್ತಾನೆ ಎಂದು ತಿಳಿಸಿರುತ್ತಾರೆ.

2. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

3. ಸದರಿ ಬಸ್ ಚಾಲಕನು ಈಗ ಆರೋಪಿತನಾಗಿ ನ್ಯಾಯಾಲಯದ ಮುಂದೆ ಇದ್ದಾನೆ.

**ಪಾಟೀ ಸವಾಲು : ಆರೋಪಿಪರ ವಕೀಲರಿಂದ**

ನಾನು ಅಪಘಾತವಾದಾಗ ರಬಕವಿಯ ಬಸವನಗರದಲ್ಲಿ ವಾಸಿಸುತ್ತಿದ್ದೆನು. ರಬಕವಿ ಬಸ್ ನಿಲ್ದಾಣದಿಂದ ಹನಗಂಡಿ ಸುಮಾರು 4 ಕಿ.ಮೀ ನಷ್ಟು ಆಗಬಹುದು. ಸದರಿ 4 ಕಿ.ಮೀ ಗಳನ್ನು ನಡೆಯುತ್ತಾ ಕ್ರಮಿಸಬೇಕಾದರೆ 45 ನಿಮಿಷಗಳಿಂದ 1 ಗಂಟೆ ಬೇಕಾಗುತ್ತದೆ. ಅಪಘಾತ ಸ್ಥಳ ಚಕ್ಕಬಂದಿಯ ಉತ್ತರ ಮತ್ತು ದಕ್ಷಿಣಕ್ಕೆ ಮನೆಗಳು ಇರುತ್ತವೆ. ಪೂರ್ವ ಮತ್ತು ಪಶ್ಚಿಮಕ್ಕೆ ರಸ್ತೆ ಇತ್ತು. ಸದರಿ ಸ್ಥಳದಿಂದ ಹಿಂದಗಡೆ ತಿರುವು ಇರುತ್ತದೆ ಮತ್ತು ಸ್ಥಳ ಮುಂದೆ ಒಂದು ದೊಡ್ಡ ತಿರುವು ಇರುತ್ತದೆ ಎಂದರೆ ಸಾಕ್ಷಿಯು ಸ್ಥಳದ ಹಿಂದಗಡೆ 150 ಮೀಟರ ಅಂತರದಲ್ಲಿ ತಿರುವು ಇದೆ, ಆದರೆ ಮುಂದುಗಡೆ ಯಾವುದೇ ತಿರುವು ಇರುವುದಿಲ್ಲ. ಅಪಘಾತ ಸ್ಥಳದಿಂದ ಸುಮಾರು 400 ಮೀಟರ್ ಅಂತದಲ್ಲಿ ಒಂದು ತೀವ್ರ ತಿರುವು ಇರುತ್ತದೆ. ಅಪಘಾತ ಸ್ಥಳವು ಹನಗಂಡಿಯ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಹೌದು. ಸ್ಥಳ ಪಂಚನಾಮೆಯ ಜೊತೆಗೆ ಲಗತ್ತಿಸಿದ ಹಾತನಕಾಶೆಯು ದೇಸಾಯಿ ರವರ ಜಮೀನು ಎಂದು ನಮೂದಿಸಿದ್ದು , ಸದರಿ ದೇಸಾಯಿ ರವರ ಜಮೀನು ಕುರಿತು ನನಗೆ ಮಾಹಿತಿ ಇಲ್ಲ. ನನಗೆ ಸಂಜೀವ ಕೊಲ್ಲೂರು ಅಂತ ಹೊರತುಪಡಿಸಿ ಬೇರೆ ಯಾವುದೇ ಹೆಸರು ಇರುವುದಿಲ್ಲ. ಚಾಸಾ-4 ಮತ್ತು ನಿರ್ವಾಹಕರು ನನಗೆ ಪ್ರಥಮ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ನನಗೆ ತಿಳಿಸಿರುತ್ತಾರೆ. ಸದರಿ ವಿಷಯಗಳನ್ನು ಚಾಸಾ-4 ರವರು ನನಗೆ ತಿಳಿಸಿರುತ್ತಾರೆ. ಪದ್ಮಾ ಆಸ್ಪತ್ರೆಯವರು ನನ್ನ ಗಾಯದ ಪ್ರಮಾಣಪತ್ರದಲ್ಲಿ ಸಂಜೀವ ಕುಲ್ಲೂರ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವೈದ್ಯಕೀಯ ಪ್ರಮಾಣಪತ್ರವನ್ನು ನೋಡಿ ಹೌದು ಅಂತ ನುಡಿದಿರುತ್ತಾರೆ , ಸಾಕ್ಷಿಯು ಮುಂದುವರೆದು ಸದರಿ ವೈದ್ಯಕೀಯ ಪ್ರಮಾಣಪತ್ರದಲ್ಲಿ ಅಡ್ಡ ಹೆಸರನ್ನು ತಿದ್ದಿ ಅದಕ್ಕೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ 3 ರಿಂದ 4 ತಿಂಗಳ ವರೆಗೆ ಪ್ರಜ್ಞೆ ಇರಲಿಲ್ಲ. UAIMS ರವರು ತಮ್ಮ ವೈದ್ಯಕೀಯ ಪ್ರಮಾಣಪತ್ರದಲ್ಲಿ Was hit by Bus while walking at Rabakavi ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನಾನು ರಬಕವಿಯ ಕಡೆಗೆ ಬರುತ್ತಾ ಇದ್ದೆ ಎಂದು ನುಡಿಯುತ್ತಾರೆ.

2. ಸದರಿ ಅಪಘಾತ ರಬಕವಿಯಲ್ಲಿ ಆಗಿದ್ದರಿಂದ UAIMS ರವರು ವೈದ್ಯಕೀಯ ಪ್ರಮಾಣಪತ್ರದಲ್ಲಿ ರಬಕವಿ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ, ಅರೆ ಪ್ರಜ್ಞೆ ಅವಸ್ಥೆಯಲ್ಲಿ ಇದ್ದ ಕಾರಣ ಸದರಿ UAIMS ರವರಿಗೆ ಅಪಘಾತ

ಸ್ಥಳ ರಬಕವಿ ಎಂದು ತಿಳಿಸಿದ್ದು ಅದರ ಮೇಲೆ ಸದರಿಯವರು ರಬಕವಿ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ರಸ್ತೆಯನ್ನು ಸಡನ್ ಆಗಿ ದಾಟು ಬೇಕಾದರೇ ಅಪಘಾತ ಆಗಬಹುದು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದ ದಿನಾಂಕ ನಿಖರವಾಗಿ ನನಗೆ ನೆನಪಿಲ್ಲ. ದಿಃ 01-02-2023 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಹೌದು. ನನ್ನ ಹೇಳಿಕೆಯನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ, ಅವರ ಹೆಸರು ಹೇಳಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಮೊದಲನೇಯ ಎರಡು ಸಾಲುಗಳು ಬರೆಯಿಸಿದ್ದು ಸರಿ ಇರುತ್ತದೆ. ಸದರಿ ಬಸ್ ಚಾಲಕನ ಹೆಸರು ಪೊಲೀಸರು ಹೇಳಿರುತ್ತಾರೆ. ಅಪಘಾತವಾದ ಒಂದೂವರೆ ತಿಂಗಳ ನಂತರ ಪೊಲೀಸರು ಚಾಲಕನ ಹೆಸರು ತಿಳಿಸಿರುತ್ತಾರೆ. ಸದರಿ ಬಸ್ ಸಂಖ್ಯೆಯು ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಟ್ಟದ್ದು ಅವುಗಳನ್ನು ನಾನು ಪಡೆದುಕೊಂಡಿರುತ್ತೇನೆ. ಇದನ್ನು ಹೊರತುಪಡಿಸಿ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಹೌದು.

3. ಸದರಿ ಬಸ್ ತಿರುವು ಇದ್ದ ಕಾರಣ ನಿಧಾನವಾಗಿ ಚಲಿಸುತ್ತಿದ್ದು, ಸದರಿ ಬಸ್ ವೇಗವಾಗಿ ಬರುತ್ತಿತ್ತು ಎಂದು ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಸ್ ಚಾಲಕನು ಯಾವುದೇ ಅಪಘಾತ ಮಾಡದೇ ಇದ್ದರು, ನನಗೆ ಪರಿಹಾರ ಹಣ ಸಿಗುವ ಸಲುವಾಗಿ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**

**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

**ಸಿಸಿ ನಂಃ 376/2023**
**ಸಿಡಬ್ಲ್ಯೂ:4 ಪಿಡಬ್ಲ್ಯೂಃ 3**

| | |
|---|---|
| ಸಾಕ್ಷಿದಾರರ ಹೆಸರು | ಸತೀಶ್ ಹಜಾರೆ |
| ತಂದೆ/ಗಂಡನ ಹೆಸರು | ವಿಜಯಕುಮಾರ |
| ವಯಸ್ಸು | 50 |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ರಬಕವಿ |

**ಸಾಕ್ಷಿಯನ್ನು ಇಂದು ದಿನಾಂಕಃ 23-01-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಚಾಸಾ-1 , 5, 6, 7 ಮತ್ತು 9 ರವರ ಪರಿಚಯ ಇರುತ್ತದೆ. ಆರೋಪಿ ಪರಿಚಯ ಇರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ತೇರದಾಳ ರಸ್ತೆಯ ಹತ್ತಿರ ಚಾಸಾ-9 ರವರ ಅಪಘಾತ ಆಗಿರುತ್ತದೆ. ಸದರಿ ಅಪಘಾತ ಸರ್ಕಾರಿ ಬಸ್‌ಯಿಂದ ಆಗಿರುತ್ತದೆ. ಸದರಿ ಬಸ್ ಯಾವ ಡಿಪೋದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಂತರ ಚಾಸಾ-9 ರವರನ್ನು ದಾನಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ಹೇಗೆ ಮತ್ತು ಯಾವ ವಾಹನಗಳ ನಡುವೆ ಆಗಿರುತ್ತದೆ ಎಂದು ಗೊತ್ತಿಲ್ಲ. ಈ ಕುರಿತು ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಸದರಿ ಅಪಘಾತದ ಕುರಿತು ನನಗೆ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ**

ದಿನಾಂಕ:23-01-2023 ರಂದು ನಾನು ಮತ್ತು ಚಾಸಾ-9 ರವರು ಎಂದಿನಂತೆ ಬೆಳಿಗ್ಗೆ ವಾಕಿಂಗ್ ಗೆ ಹೋಗಿದ್ದೆವು ಎಂದರೆ ಸರಿಯಲ್ಲ. ವಾಕಿಂಗ್ ಮುಗಿಸಿ ಹನಗಂಡಿ ಕಡೆಗೆ ಮರಳಿ ಬರುವಾಗ ನನ್ನ ಮುಂದೆ ಚಾಸಾ-9 ರವರು ಹೋಗಿತ್ತಿದ್ದರು ಎಂದರೆ ಸರಿಯಲ್ಲ. ಹನಗಂಡಿ

ಕಡೆಯಿಂದ ಬಂದ KSRTC ಬಸ್ ನಂ. KA-29-F-1352 ನೇದ್ದನ್ನು ಆರೋಪಿತನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ನಡೆಸಿಕೊಂಡು ಬಂದು ಚಾಸಾ-9 ರವರಿಗೆ ಡಿಕ್ಕಿ ಹಾಯಿಸಿ ಅಪಘಾತಪಡಿಸಿದರು ಎಂದರೆ ಸರಿಯಲ್ಲ. ಚಾಸಾ-9 ರವರು ರಸ್ತೆ ಬದಿಗೆ ಬಿದ್ದು ಅವರಿಗೆ ತಲೆಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಚಾಸಾ-1 ರವರಿಗೆ ಫೋನ್ ಮುಖಾಂತರ ತಿಳಿಸಿದೆನು ಎಂದರೆ ಸರಿಯಲ್ಲ. ಸದರಿ ಅಪಘಾತಪಡಿಸಿ ಬಸ್ ಸ್ಥಳದಲ್ಲಿ ನಿಂತಿದ್ದು , ಚಾಲಕನ ಹೆಸರು ವಿಚಾರಿಸಲಾಗಿ ಶಿವಪ್ಪ ರಾಮಲಿಂಗ ತಳವಾರ ಎಂದು ತಿಳಿದನು ಎಂದರೆ ಸರಿಯಲ್ಲ. ನಂತರ ಚಾಸಾ-1 ಮತ್ತು ಅವರ ಸಂಬಂಧಿಕರು ಚಾಸಾ-9 ರವರನ್ನು ಉಪಚಾರದ ಕುರಿತು ದಾನಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಂತರ ಚಾಸಾ-9 ರವರನ್ನು ಹೆಚ್ಚಿನ ಉಪಚಾರಕ್ಕಾಗಿ ಮಿರಜ ಭಾರತಿ ಆಸ್ಪತ್ರೆಗೆ ದಾಖಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ಈ ಕುರಿತು ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

3. ಈಗ ಓದಿ ಹೇಳಿದಂತೆ ದಿಃ 24-01-2023 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪಿಕೊಳ್ಳದ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಂತೆ ನಾನು ಹೇಳಿಕೆಯನ್ನು ನೀಡಿದ್ದರು ಸಹ ಮತ್ತು ಅಪಘಾತವನ್ನು ಕಣ್ಣಾರೆ ನೋಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**